# ಅತ್ಯಾಚಾರ: ಹೊಸ ದೃಷ್ಟಿಕೋನ ಅಗತ್ಯ

ದೆಹಲಿಯಲ್ಲಿ ವಿದ್ಯಾರ್ಥಿನಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣ ಇಡೀ ರಾಷ್ಟ್ರವನ್ನೇ ತಲ್ಲಣಗೊಳಿಸಿದೆ. ಎಲ್ಲೆಡೆ ಆಕ್ರೋಶ, ಪ್ರತಿಭಟನೆಗಳು ವ್ಯಕ್ತವಾಗಿವೆ. ಅತ್ಯಾಚಾರ ಪ್ರಕರಣಗಳಲ್ಲಿ ಆರೋಪಿಗೆ ಮರಣದಂಡನೆ ಅಥವಾ ಆತನನ್ನು ನಿರ್ವೀರ್ಯಗೊಳಿಸುವಂತಹ ಕಠಿಣ ಶಿಕ್ಷೆಗಳನ್ನು ವಿಧಿಸಬೇಕೆಂಬ ಕೂಗು ಮತ್ತೆ ಜೀವ ಪಡೆದುಕೊಂಡಿದೆ. ಲೈಂಗಿಕ ಹಿಂಸೆಯ ಕ್ರೌರ್ಯವನ್ನು ಪ್ರದರ್ಶಿಸುವ ಈ ಹೇಯ ಪ್ರಕರಣದ ವಿರುದ್ಧ ವ್ಯಕ್ತವಾಗುತ್ತಿರುವ ಈ ಆಕ್ರೋಶ, ಹತಾಶೆ ಸಹಜವಾದದ್ದು. ಆದರೆ ಈ ಭಾವನಾತ್ಮಕ ಪ್ರತಿಕ್ರಿಯೆಗಳಿಂದಾಚೆಗೆ, ಅತ್ಯಾಚಾರ ಅಪರಾಧವನ್ನು ಅರ್ಥೈಸುವ ವ್ಯವಧಾನ ಹಾಗೂ ಪ್ರಬುದ್ಧತೆಯನ್ನು ಸಮಾಜ ಪ್ರದರ್ಶಿಸಬೇಕಿದೆ.

ದೆಹಲಿಯ ಅತ್ಯಾಚಾರ ಪ್ರಕರಣ, ಮಹಿಳೆಯರು ಪ್ರತಿದಿನ ಅನುಭವಿಸುತ್ತಿರುವ ಹಿಂಸೆಗಳ ಸರಣಿಯ ಭಾಗವೇ. ಮನೆಯೊಳಗೆ ಹಾಗೂ ಹೊರಗೆ ನಾನಾ ರೂಪಗಳಲ್ಲಿ ಈ ಹಿಂಸೆ ವ್ಯಕ್ತವಾಗುತ್ತಿರುತ್ತವೆ. ಗೋಡೆಗಳ ಮಧ್ಯೆ ನಡೆಯುವ ಹಿಂಸೆ , ದುಡಿಯುವ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳ, ಬೀದಿಗಳಲ್ಲಿ ಅಥವಾ ಸಾರ್ವಜನಿಕ ಸಾರಿಗೆಗಳಲ್ಲಿನ ಲೈಂಗಿಕ ದುರ್ವರ್ತನೆಗಳು ಮಾಮೂಲೆನಿಸುವಷ್ಟು ಮಟ್ಟಿಗೆ ನಿತ್ಯದ ವಿದ್ಯಮಾನಗಳಾಗಿವೆ. ಇವುಗಳ ವಿರುದ್ಧ ಒಂದು ಸಮಾಜವಾಗಿ ದನಿ ಎತ್ತಿದ್ದೇವೆಯೇ ಎಂಬುದು ಪ್ರಶ್ನೆ. ದನಿ ಎತ್ತುವವರನ್ನು, 'ನಗರ ಸ್ತ್ರೀವಾದಿ'ಗಳು, 'ಮನೆಮುರುಕರು' ಎಂಬಂಥ ಹಣೆಪಟ್ಟಿ ಹಚ್ಚಿ ಸಮಾಜ ಸಂಶಯದಿಂದಲೇ ನೋಡುತ್ತದೆ. ಹೆಣ್ಣು, ಹೊನ್ನು, ಮಣ್ಣಿನ ಒಡೆತನವನ್ನು ತನ್ನ ಹಕ್ಕಾಗಿಸಿಕೊಂಡಂತಹ ಚಿಂತನಾಕ್ರಮ, ಪುರುಷ ಮನಗಳಲ್ಲಿ ಹಾಸುಹೊಕ್ಕಾಗಿದೆ. ಹೀಗಾಗಿಯೇ ಮಹಿಳೆ ವಿರುದ್ಧದ ಅಪರಾಧಗಳನ್ನು ಅರ್ಥೈಸಿಕೊಳ್ಳುವಲ್ಲಿ ಹಾಗೂ ನಿಯಂತ್ರಿಸುವಲ್ಲಿ ಸಮಾಜ ಸೋಲುತ್ತಿದೆ.

ಅತ್ಯಾಚಾರದ ವಿರುದ್ಧ ಹೋರಾಡಲು ಭಾರತದಲ್ಲಿ ಸಾಕಷ್ಟು ಕಾನೂನುಗಳಿವೆ. ಹೀಗಿದ್ದೂ ಶಿಕ್ಷೆಯಾಗುವ ಪ್ರಮಾಣ ಸರಾಸರಿ ಶೇಕಡ 26. ಏಕೆ ಹೀಗೆ? ಅತ್ಯಾಚಾರಕ್ಕೊಳಗಾದ ಮಹಿಳೆಯನ್ನೇ ಅವಮಾನಿಸುವಂತಹ ಮನಸ್ಥಿತಿಗಳು ಇದಕ್ಕೆ ಕಾರಣ. 'ಅಷ್ಟು ರಾತ್ರಿಯಲ್ಲಿ ಅವಳ್ಯಾಕೆ ಹೊರಗಿರಬೇಕಿತ್ತು?' 'ಯಾಕೆ ಅಂತಹ ಬಟ್ಟೆ ತೊಟ್ಟಿದ್ದಳು?', 'ಅವಳ್ಯಾಕೆ ವಾದ ಮಾಡಬೇಕಿತ್ತು?', 'ಅವಳ ಜೊತೆಗಿದ್ದಾತ ಯಾರು?', ಇಂತಹ ಪ್ರಶ್ನೆಗಳಲ್ಲಿ ಅತ್ಯಾಚಾರಕ್ಕೊಳಗಾದವಳನ್ನೇ 'ಅಪರಾಧಿ' ಯಾಗಿಸಲಾಗುತ್ತದೆ. ಈ ಪೂರ್ವಗ್ರಹಗಳಿಂದಾಗಿ ತನಿಖೆ ಸಹಜವಾಗಿಯೇ ದೋಷಪೂರ್ಣವಾಗುತ್ತದೆ. ಕಾನೂನಿನ ಕುಣಿಕೆಯಿಂದ ಬಿಡುಗಡೆ ಪಡೆಯುವುದು ಅತ್ಯಾಚಾರಿಗಳಿಗೂ ಸುಲಭವಾಗುತ್ತದೆ. ನಮ್ಮ ಅನೇಕ ಎಂಪಿಗಳು, ಶಾಸಕರುಗಳೂ ಅತ್ಯಾಚಾರ ಪ್ರಕರಣಗಳಲ್ಲಿ ಸಿಲುಕಿದ್ದಾರೆ. ಜನಪ್ರತಿನಿಧಿಗಳಾಗಲು ಈ ಆರೋಪಗಳು ಅವರಿಗೆ ಯಾವುದೇ ತಡೆ ಒಡ್ಡಿಲ್ಲ.

ಅತ್ಯಾಚಾರವನ್ನು ಸಮಾಜ ಸಹಿಸುವುದಿಲ್ಲ ಎಂಬಂತಹ ಸಂದೇಶವನ್ನು ನೀಡುವುದಾದರೂ ಹೇಗೆ? ಪ್ರಕರಣಗಳ ವಿಚಾರಣೆಯನ್ನು ಶೀಘ್ರವಾಗಿ ಮುಗಿಸಿ ಶಿಕ್ಷೆ ವಿಧಿಸುವಂತಾಗಬೇಕು. ಕನಿಷ್ಠ ಏಳು ವರ್ಷಗಳ ಜೈಲುಶಿಕ್ಷೆಗೆ ಕಾನೂನಿನಲ್ಲಿ ಈಗಾಗಲೇ ಅವಕಾಶವಿದೆ. ಆದರೆ ಈ ಶಿಕ್ಷೆ ಕಾನೂನು ಪುಸ್ತಕಗಳಲ್ಲಿ ಮಾತ್ರ ಇಲ್ಲ; ಖಚಿತವಾಗಿ ಜಾರಿಯಾಗುತ್ತದೆ ಎಂಬಂತಹ ಸಂದೇಶ ಸಮಾಜಕ್ಕೆ ತಲುಪಬೇಕು. ಇದಕ್ಕಾಗಿ ನಮ್ಮ ಅಪರಾಧ ನ್ಯಾಯವ್ಯವಸ್ಥೆಯಲ್ಲಿ ಸುಧಾರಣೆಯಾಗಬೇಕು. ಮಹಿಳೆಯನ್ನು ನಿಕೃಷ್ಟವಾಗಿ ಅಥವಾ ಭೋಗದ ವಸ್ತುಗಳಾಗಿ ಕಾಣುವಂತಹ  ಸಾಮಾಜಿಕ ದೃಷ್ಟಿಕೋನಗಳಲ್ಲಿ ದೊಡ್ಡ ಪರಿವರ್ತನೆಯಾಗಬೇಕು. ಮುಕ್ತ ಆರ್ಥಿಕತೆಯಿಂದಾಗಿ, ನಮ್ಮ ಸಾಮಾಜಿಕ ಬದುಕುಗಳಲ್ಲಿ ಅಪಾರ ಪಲ್ಲಟಗಳನ್ನು ಕಾಣುತ್ತಿದ್ದೇವೆ. ಆದರೆ ಮಹಿಳೆ ಕುರಿತಾದ ಚಿಂತನಾಕ್ರಮಗಳಲ್ಲಿ ಹಳೆ ವರಸೆಯೇ ಮುಂದುವರೆದಿದೆ. ಸಾಮಾಜಿಕ ಹಾಗೂ ಸಾರ್ವಜನಿಕ ಬದುಕಲ್ಲಿ ಗೋಚರವಾಗುತ್ತಿರುವ ಆತ್ಮವಿಶ್ವಾಸ ತುಂಬಿದ ಹೊಸ ಮಹಿಳೆಯನ್ನು ಸಹಜವಾಗಿ ಸ್ವೀಕರಿಸಲು ಪುರುಷಪ್ರಧಾನ ಮೌಲ್ಯಗಳ ಮನಸ್ಸುಗಳು ಸಿದ್ಧವಿಲ್ಲದಿರುವುದೂ ಮಹಿಳೆ ವಿರುದ್ಧದ 'ಹಿಂಸೆ'ಗಳಿಗೆ ಕಾರಣವಾಗುತ್ತಿವೆ. ಹೀಗಾಗಿ, ಸಮಾಜದೊಳಗೇ ಹುದುಗಿರುವ ಸಮಸ್ಯೆಗೆ ಮರಣದಂಡನೆಯಂತಹ ಶಿಕ್ಷೆ ಪರಿಹಾರವಲ್ಲ. ಇಂತಹ ಹಿಂಸೆಯನ್ನು ಪೋಷಿಸುವ ಸಾಮಾಜಿಕ ವ್ಯವಸ್ಥೆಯ ಕುರಿತಾಗಿ ಸಮಸ್ತ ನಾಗರಿಕರೂ ಜವಾಬ್ದಾರಿ ಹೊರಬೇಕು. ಇದು ಮಹಿಳೆಯರೇ ಹೋರಾಡಬೇಕಾದ ಮಹಿಳೆಯರ ಸಮಸ್ಯೆ ಮಾತ್ರವಲ್ಲ ಎಂಬುದನ್ನು ಸಮಾಜ ಮನಗಾಣಬೇಕು.

'ನಾಮದಲ್ಲಿ ಹೆಂಗಸೆಂಬ ಹೆಸರಾದರೇನು ಭಾವಿಸಲು ಗಂಡುರೂಪು' ಎಂಬಂತಹ ಮಾತುಗಳನ್ನು ಹೇಳಿದ ಅಕ್ಕಮಹಾದೇವಿ, ಹೆಣ್ಣನ್ನು ದೇಹವಾಗಿ ಕಾಣುವಂತಹ ಭೌತಿಕ ನೋಟದಾಚೆಗೆ ಅರಿವಿನ ಲೋಕವನ್ನು ಹನ್ನೆರಡನೆ ಶತಮಾನದಲ್ಲೇ ವಿಸ್ತರಿಸಿದಳು. ಈ ಅರಿವು ಇಂದಿಗೂ ಅಗತ್ಯ. ಅಲ್ಲಿಯವರೆಗೆ 'ಏನ ಮಾಡಿದಡೆಯೂ ನಾನು ಅಂಜುವಳಲ್ಲ' ಎಂಬಂತಹ ಅಕ್ಕನ ಮಾತನ್ನೇ ಇಂದಿನ ಮಹಿಳೆಯರೂ ಪುನರುಚ್ಚರಿಸಬೇಕಾಗಿದೆ.

■ ಸಿ.ಜಿ.ಮಂಜುಳಾ

ದೆಹಲಿಯ ಅತ್ಯಾಚಾರ ಪ್ರಕರಣ, ಮಹಿಳೆಯರು ಪ್ರತಿದಿನ ಅನುಭವಿಸುತ್ತಿರುವ ಹಿಂಸೆಗಳ ಸರಣಿಯ ಭಾಗವೇ. ಮನೆಯೊಳಗೆ ಹಾಗೂ ಹೊರಗೆ ನಾನಾ ರೂಪಗಳಲ್ಲಿ ಈ ಹಿಂಸೆ ವ್ಯಕ್ತವಾಗುತ್ತಲೇ ಇರುತ್ತದೆ. ನಾಲ್ಕು ಗೋಡೆಗಳ ಮಧ್ಯೆ ನಡೆಯುವ ಹಿಂಸೆ , ದುಡಿಯುವ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳ, ಬೀದಿಗಳಲ್ಲಿ ಅಥವಾ ಸಾರ್ವಜನಿಕ ಸಾರಿಗೆಗಳಲ್ಲಿನ ಲೈಂಗಿಕ ದುರ್ವರ್ತನೆಗಳು ಮಾಮೂಲೆನಿಸುವಷ್ಟು ಮಟ್ಟಿಗೆ ನಿತ್ಯದ ವಿದ್ಯಮಾನಗಳಾಗಿವೆ.



ವಿಷ್ಣುಕುಮಾರ್